# INTERNATIONAL INDIAN SCHOOL DAMMAM

## FIRST TERMINAL EXAM (2017 - 18)

**Class : VI** | **Duration : 3 Hrs.**
**Subject: Kannada** | **Total Marks : 80**

---

**GENERAL INSTRUCTIONS :**

1) Read all questions carefully before answering.
2) All Questions must be numbered correctly as in the question paper.

---

### ವಿಭಾಗ – ಎ (MCQ's and Objectives)

**ಅ) ಆವರಣದಿಂದ ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ :** **1 x10 = 10**

೧) ತುಂಗೆ, ಭದ್ರೆ, ಕಾವೇರಿ ನಿನ್ನ _________ ( ನದಿಗಳು, ನಿಧಿಗಳು, ವಿಧಿಗಳು)
೨) _________ ಧೀರ ಶೂರರಲ್ಲಾ ನಿನ್ನ ಮಕ್ಕಳು ( ಹಾರ, ಭಾರ, ವೀರ)
೩) ದಿನವೂ ಎದ್ದು ನಿನ್ನ _________ ನಮನ ಸಲಿಸುವೆ. ( ನೆನೆದು, ನೆಗೆದು, ನಡೆದು )
೪) ಮೈಸೂರಿನ ದಸರಾ ಉತ್ಸವವು ವಿಶ್ವದಲ್ಲೇ ಪ್ರಸಿದ್ಧಿ ________. ( ಪಡೆದಿದೆ, ಪಡೆದಿತ್ತು, ಪಡೆಯುತ್ತದೆ)
೫) ಒಂದು ದಿನ ಎರಡು ಕೊಬ್ಬಿದ ________ ಅಲ್ಲಿಗೆ ಬಂದವು. ( ಕುರಿಗಳು, ಗೂಳಿಗಳು, ಹಸುಗಳು)
೬) _______ ನಲ್ಲಿ ಅಂದವಾದ ಅರಮನೆಯಿದೆ. ( ಮೈಸೂರು, ಮಾಲುರು, ಮದ್ದುರು)
೭) ಮೈಸೂರು ಕರ್ನಾಟಕ ರಾಜ್ಯದ ಬಹಳ ಸುಂದರವಾದ ________. ( ನಗರ, ಪಟ್ಟಣ, ಗ್ರಾಮ)
೮) ಒಂದು ಕಾಡಿನ ಬಳಿ ಒಂದು ದೊಡ್ಡ _______ ಇತ್ತು. (ಕೆರೆ, ನದಿ, ಹೊಳ್ಳ)
೯) ಪಂಪ, ರನ್ನ, ಬಸವರೆಲ್ಲಾ ನಿನ್ನ _________ (ಸವಿಗಳು, ರವಿಗಳು, ಕವಿಗಳು)
೧೦) ನಿನ್ನ ಮಣ್ಣ ಗುಣಗಳನ್ನು ಬಿಡದೆ _______ ( ತಿಳಿವೆವು, ಸುಳಿವೆವು, ಸೆಳೆವೆವು)

**ಆ) ಈ ಕೆಳಗಿನ ಯಾವುದಾದರೂ ಹತ್ತು ಪದಗಳಿಗೆ ಶಬ್ದಾರ್ಥ ಬರೆಯಿರಿ : (Any 10 )** **½ x 10 = 5**

೧) ಪೊರೆ ೨) ಕುವರ ೩) ಅನತಿ ೪) ಒಕ್ಕಲು
೫) ಮುದ ೬) ಕುತೂಹಲ ೭) ವಿವೇಕ ೮) ಖಡ್ಗ
೯) ಸಮೂಹ ೧೦) ಕಾಳಗ ೧೧) ನೆನೆದು ೧೨) ರತ್ನದಮ್ಮ

**ಇ) ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ:** **½ x 8 = 4**

೧) ಉಪಕಾರ ೨) ಕೆಟ್ಟಗುಣ ೩) ಆಗ ೪) ಬೀಳು
೫) ಮಿತ್ರ ೬) ವಿವೇಕ ೭) ನಗು ೮) ದೊಡ್ಡದು

**ಈ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ :** **½ x 4 = 2**

೧) ಜಯ, ವಿಜಯ, ಒಲವು, ಗೆಲುವು [ ]
೨) ರಾಜ್ಯ, ವಿಶ್ವ, ಜಗತ್ತು, ಪ್ರಪಂಚ [ ]
೩) ಸುಖಃ, ಸಂತೋಷ, ಆನಂದ, ದುಃಖ [ ]
೪) ಜಗಳ, ಕಾಳಗ, ಕದನ, ಪ್ರೀತಿ [ ]

ಉ) ಹೊಂದಿಸಿ ಬರೆಯಿರಿ. : ½ x 8 = 4

| | |
|---|---|
| ೧) ಮಾವು, ಹಲಸು, ಬಾಳೆ, ಸೀಬೆ | ಮೃಗಾಲಯ |
| ೨) ನಮ್ಮ ಪಡೆದು ದಿನವು ಪೊರೆವ | ಕಾಳಗ |
| ೩) ಚಾಮರಾಜೇಂದ್ರ | ನಿನ್ನ ಹಣ್ಣುಗಳು |
| ೪) ಗೂಳಿಗಳ | ಕನ್ನಡಮ್ಮನೆ |
| ೫) ಮೈಸೂರು | ನಗುತ್ತಿದ್ದವು |
| ೬) ಸಾಕಷ್ಟು ನೀರು | ಮೆರವಣಿಗೆ |
| ೭) ಜಂಬೂ ಸವಾರಿ | ತುಂಬಿತ್ತು |
| ೮) ಕೇಕೆ ಹಾಕಿ | ಸುಂದರ ನಗರ |

## ವಿಭಾಗ – ಬಿ ( V.S.A)

ಅ) ಈ ಕೆಳಗಿನ ಸ್ಥಳಗಳನ್ನು ಹೆಸರಿಸಿ : 1 x 4 = 4

೧) ಅಡಿಗೆ ಮಾಡುವ ಸ್ಥಳ – ( _________ )
೨) ಕ್ರೀಡೆಗಳು ನಡೆಯುವ ಸ್ಥಳ – ( _________ )
೩) ತರಕಾರಿಗಳನ್ನು ಮಾರುವ ಸ್ಥಳ – ( _________ )
೪) ಗ್ರಂಥಗಳನ್ನು ಸಂಗ್ರಹಿಸುವ ಸ್ಥಳ – ( _________ )

ಆ) ಈ ಕೆಳಗಿನ ಬಿಟ್ಟ ಸ್ಥಳಗಳನ್ನು ತುಂಬಿರಿ : 1 x 5 = 5

೧) ಕರ್ನಾಟಕದ ರಾಜಧಾನಿ _________.
೨) ಒಂದು ______ ಬುದ್ಧಿಯ ಕಪ್ಪೆಯಿತ್ತು.
೩) ಕರ್ನಾಟಕದ ಆಡಳಿತ ಭಾಷೆ ______
೪) ದೊಡ್ಡವರ ಬುದ್ಧಿಯ ಮಾತುಗಳನ್ನು ಗೌರವಿಸುವವರೇ ______ ಮಕ್ಕಳು.
೫) ಮೈಸೂರು ಒಂದು ______ ನಗರವಾಗಿದೆ.

ಇ) ಈ ಮಾತನ್ನು ಯಾರು ಯಾರಿಗೆ ಹೇಳಿದರು : 1 x 2 = 2

೧) "ಬಂಧುಗಳೇ, ಇನ್ನು ಈ ಕಾಳಗ ನೋಡಿದ್ದು ಸಾಕು, ನಡೆಯಿರಿ ಹೋಗೋಣ."
೨) "ನಿನಗೆ ಭಯವಾದರೆ ನೀನು ಹೋಗು"

ಈ) ಈ ಕೆಳಗಿನ ವಾಕ್ಯಗಳಲ್ಲಿ ಸರಿ/ತಪ್ಪು ಗುರುತಿಸಿ ಬರೆಯಿರಿ: 1 x 4 = 4

೧) ಮೈಸೂರಿನ ಹವಾಮಾನ ಉತ್ತಮವಾಗಿಲ್ಲ. ( )
೨) ಒಂದು ಕಾಡಿನ ಬಳಿ ಒಂದು ದೊಡ್ಡ ಕೆರೆಯಿತ್ತು. ( )
೩) ಒಂದು ದಿನ ಎರಡು ಕೊಬ್ಬಿದ ಕುರಿಗಳು ಅಲ್ಲಿಗೆ ಬಂದವು. ( )
೪) ಮೈಸೂರಿನಲ್ಲಿ ನಾನಾ ಬಗೆಯ ಉದ್ಯಮಗಳಿವೆ. ( )

ಉ) ಈ ಕೆಳಗಿನ ಪದಗಳನ್ನು ಸ್ವಂತವಾಕ್ಯದಲ್ಲಿ ಬರೆಯಿರಿ : 1 x 3 = 3

೧. ಕನ್ನಡಮ್ಮ ೨) ಕಾರ್ಖಾನೆ ೩) ಕೆರೆ

ಊ) ಈ ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ : 1 x 4 = 4

೧. ಮಜವಾಗಿದೆ ಈ ಗೂಳಿಗಳ ಬಹಳ ಹೋರಾಟ
೨) ಕುಡಿಯುತ್ತಿದ್ದವು ನೀರನ್ನೇ ಆ ಕೆರೆಯ
೩) ಮೈಸೂರಿನಲ್ಲಿ ಅರಮನೆಯಿದೆ ಅಂದವಾದ
೪) ಬೃಂದಾವನವಿದೆ ಮೈಸೂರಿನಲ್ಲಿ ಸೊಬಗಿನ

## ವಿಭಾಗ – ಸಿ ( S.A. and Grammar)

ಅ) ಈ ಕೆಳಗಿನ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ : (Any 8) 1 x 8 = 8

೧) ಮೈಸೂರಿನ ಸಮೀಪದಲ್ಲಿರುವ ಸೊಬಗಿನ ತಾಣ ಯಾವುದು?
೨) ನಾವು ಏನು ತೊರೆದಿದ್ದೇವೆ?
೩) ಮೈಸೂರು ಸಮುದ್ರಮಟ್ಟಕ್ಕಿಂತ ಎಷ್ಟು ಮೀಟರ್ ಎತ್ತರದಲ್ಲಿದೆ?
೪) ಒಂದು ದಿನ ಕೆರಯ ಬಳಿಗೆ ಯಾರು ಬಂದರು?
೫) ನಮ್ಮನ್ನು ಯಾರು ಸಲಹುತ್ತಾರೆ
೬) ಕನ್ನಡಮ್ಮ' ಪದ್ಯ ಬರೆದ ಕವಿ ಯಾರು?
೭) ಒಂದ ದೊಡ್ಡ ಕೆರೆ ಎಲ್ಲಿತ್ತು?
೮) ಎಲ್ಲಾ ಕಪ್ಪೆಗಳು ಎಲ್ಲಿ ಕುಳಿತಿದ್ದವು?
೯) ನಾವು ಏನು ಕಲಿಯುವೆವು?
೧೦) ಮೈಸೂರು ಅರಮನೆ ಹಿಂಭಾಗದಲ್ಲಿ ಯಾವ ಅರಮನೆಯಿದೆ?

ಆ) ಈ ಕೆಳಗಿನ ಪದಗಳಿಗೆ ಪ್ರಾಸಪದಗಳನ್ನು ಬರೆಯಿರಿ : 1 x 2 = 2

೧) ಕನ್ನಡಮ್ಮನೆ ೨) ಕವಿಗಳು

ಇ) ಈ ಕೆಳಗಿನ ಸಂಖ್ಯೆಗಳಿಗೆ ಕನ್ನಡ ಸಂಖ್ಯೆ ಮತ್ತು ಸಂಖ್ಯಾನಾಮಗಳನ್ನು ಬರೆಯಿರಿ. 1 x 4 = 4

೧) **8** ೨) **15** ೩) **23** ೪) **36**

ಈ) ಮಾದರಿಯಂತೆ ಬರೆಯಿರಿ : 1 x 2 = 2

ಮಾದರಿ : ಹರಿಸುವೆ – ಹರಿಸುತ್ತೇನೆ.

೧) ಸಲಿಸುವೆ – __________ ೨) ಕಲಿವೆವು – __________

ಉ) ಈ ಕೆಳಗಿನ ಪದಗಳಿಗೆ ಕಾಗುಣಿತಾಕ್ಷರಗಳನ್ನು ಬರೆಯಿರಿ. 1 x 2 = 2

ಟ, ___, ___, ಟೀ, ___, ___, ಟೃ, ಟೆ, ___
___, ___, ___, ಟೌ , ___, ___.

ರ, ರಾ, ರಿ, ___, ___, ___, ___, ___, ರೇ,
___, ___, ರೋ, ___, ___, ರಃ.

## ವಿಭಾಗ – ಡಿ (L.A)

**ಅ) ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ:(Any 3) 2½ x3 = 7½**

೧) ಗೂಳಿಗಳು ಕೆರೆಯ ಬಳಿಗೆ ಏಕೆ ಬಂದವು?
೨) ಮೈಸೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳು ಯಾವುವು?
೩) ಕಡೆಗೆ ಕಪ್ಪೆಗಳ ಗತಿ ಏನಾಯಿತು?
೪) ತರಲೆ ಕಪ್ಪೆಗೆ ಎಂತಹ ಗುಣವಿತ್ತು ?
೫) ಮೈಸೂರಿನಲ್ಲಿರುವ ಕೆಲವು ಜನಪ್ರಿಯ ಪದಾರ್ಥಗಳನ್ನು ಬರೆಯಿರಿ.

**ಆ) ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ: 2½ x 1 =2½**

ವೀರ ಧೀರ ___________
_____________ ಮಕ್ಕಳು
ಜಾತಿ _______________
____________ ಒಕ್ಕಲು.

**ಇ) ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 1 x 5 = 5**

ಶ್ರೀ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಎಂಬುದು ಕುವೆಂಪುರವರ ಪೂರ್ಣ ಹೆಸರು. ಇವರ ಕಾವ್ಯನಾಮವೇ ಕುವೆಂಪು. ಅವರು ಈ ಹೆಸರಿನಿಂದಲೇ ಎಲ್ಲರಿಗೂ ಚಿರ-ಪರಿಚಿತರು. ಉತ್ತಮೋತ್ತಮ ಕೃತಿಗಳನ್ನು ಬರೆದು ಹೆಸರು ಮಾಡಿದ ಶ್ರೀಯುತರು ರಸಕವಿ, ವರಕವಿ, ಮಹಾಕವಿ, ರಾಷ್ಟ್ರಕವಿ ಎಂಬ ಹೆಸರುಗಳಿಂದ ಖ್ಯಾತಿ ಪಡೆದಿದ್ದರು.

ಶ್ರೀಯುತರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಎಂಬ ಗ್ರಾಮದಲ್ಲಿ 29-12-1904 ರಲ್ಲಿ ಜನಿಸಿದರು. ಅವರು ಪ್ರಾರಂಭಿಕ ಶಿಕ್ಷಣವನ್ನು ಅಲ್ಲಿಯೇ ಪಡೆದರು. ಉನ್ನತ ಶಿಕ್ಷಣ ಪಡೆಯಲು ಮೈಸೂರಿಗೆ ಬಂದರು. ೧೯೨೪ ರಲ್ಲಿ ಎಂ.ಎ ಪದವಿ ಪಡೆದರು. ಮುಂದೆ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಉಪನ್ಯಾಸಕರಾದರು.

ಕುವೆಂಪುರವರು ಪ್ರವೃತ್ತಿಯಲ್ಲಿ ಒಬ್ಬ ಉತ್ತಮ ಕವಿಯಾಗಿದ್ದರು. ಶ್ರೀಯುತರು ಅನೇಕ ಕೃತಿಗಳನ್ನು ಬರೆದಿದ್ದಾರೆ. ಅವರು ಬರೆದ 'ಶ್ರೀ ರಾಮಾಯಣ ದರ್ಶನಂ' ಎಂಬ ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ

೧) ಕುವೆಂಪು ಅವರ ಪೂರ್ಣ ಹೆಸರೇನು?
೨) ಕುವೆಂಪುರವರು ಎಲ್ಲಿ ಮತ್ತು ಯಾವಾಗ ಜನಿಸಿದರು?
೩) ಕುವೆಂಪುರವರು ಉನ್ನತ ಶಿಕ್ಷಣವನ್ನು ಎಲ್ಲಿ ಪಡೆದರು?
೪) ಕುವೆಂಪುರವರ ಮಹಾಕಾವ್ಯ _______________
೫) ಕುವೆಂಪುರವರು ಮೈಸೂರಿನ _________ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು.

************